ಅಂತ. ನನ್ನ ಆ ಉತ್ತರದಿಂದ ಅವನಿಗೆ ಸಮಾಧಾನವಾಯಿತೊ? ಸಂತೋಷವಾಯಿತೊ? ಇಲ್ಲ, ಅನುಮಾನ ಬಂದಿತೊ ಗೊತ್ತಾಗಲಿಲ್ಲ. ಉಳಿದ ಜೊತೆಗಾರರಿಗೂ ಇದೇ ಸಮಸ್ಯೆ ಉಂಟಾಯಿತೆಂದು ತೋರುತ್ತದೆ. ಹಾಗಾಗಿಯೇ ಇನ್ನೊಬ್ಬ ಜೊತೆಗಾರನೂ ಅದೇ ಪ್ರಶ್ನೆ ಹಾಕಿದ, 'ಯಾತ್ರವ್ರ ಸಾ?' ಅಂತ ನನ್ನ ಉತ್ತರ ಅವನಿಗೂ ಅದೇ ಆಗಿತ್ತು, 'ನಾನು ನಿಮ್ಮವನೆಕಯ್ಯಾ' ಅಂತ. ನನ್ನುತ್ತರದಿಂದ ಅವರಿಗೆ ಸಮಾಧಾನವಾದಂತೆ ತೋರಲಿಲ್ಲ. ಅದೀಗ, ಸೀಟಿನ ಇನ್ನೊಂದು ತುದಿಯಿಂದ ಅದೇ ಪ್ರಶ್ನೆ ಮರುಕಳಿಸಿತು. ನನ್ನದು ಆಗಲೂ ಅದೇ ಉತ್ತರ, 'ನಾನು ನಿಮ್ಮವನೆಕಯ್ಯಾ' ಅಂತ. ಆ ಉತ್ತರವೂ ಅವರಿಗೆ ಸಮಾಧಾನ ತಂದಂತೆ ತೋರಲಿಲ್ಲ. ಇದಕ್ಕೆ ಕಾರಣವೇನಿರಬಹುದೆಂದು ನನ್ನ ದಿವ್ಯಜ್ಞಾನದಿಂದ ವಿಮರ್ಶಿಸಿದೆ, ಆಗ ನನಗೆ ಅರಿವಾಯಿತು–ಅವರೆಲ್ಲ ಬೇರೆ ಬೇರೆ ಜಾತಿಗೆ ಸೇರಿದವರಾಗಿದ್ದರು. ನನ್ನ ಮಾತು ಅವರಿಗೆ ಸಹ್ಯವಾಗಿರಲಿಲ್ಲ. ಸುಮ್ಮನೆ ನಿಂತಿದ್ದವನಿಗೆ ಕರೆದು ಜಾಗ ಕೊಟ್ಟು ಎಲ್ಲಿಯಾದರೂ ನಮಗೆ ಮೈಲಿಗೆ ಅಂಟಿಕೊಂಡಿತೊ? ಇಲ್ಲ, ಯಾವ್ದೊ ನಮ್ಮವನಲ್ಲದ ಕುಲವಿಲ್ಲದ ಜಾತಿಯವನಿಗೆ ವೃಥಾ ಜಾಗ ಕೊಟ್ಟು ಕೆಟ್ಟೆವೊ? ಎಂಬುದೇ ಅವರೆಲ್ಲರ ಅಸಮಾಧಾನಕ್ಕೆ ಕಾರಣವಾಗಿತ್ತು. ಒಟ್ಟಿನಲ್ಲಿ 'ನಾನು ನಿಮ್ಮವನೆಕಯ್ಯಾ' ಎಂದದ್ದು ಅವರಲ್ಲಿ 'ಇಂವ ನಮ್ಮವನೆಕಯ್ಯಾ' ಆಗಲೇ ಇಲ್ಲ. ನಾನು ಅವರಿಗೆ 'ಬೇರೆಯವನೆಕಯ್ಯಾ' ಆಗಿದ್ದೆ. ನಮ್ಮ ನಡುವೆ ಆಗತಾನೆ ಜನಿಸಿದ್ದ ಆತ್ಮೀಯತೆ ಅಲ್ಲೇ ಮರಣಹೊಂದಿತು. ಪರಿಣಾಮ, ಅಲ್ಲಿಂದ ಮೈಸೂರಿಗೆ ಬಂದಿಳಿಯುವವರೆಗೂ ಒಬ್ಬನೂ ಇನ್ನೊಂದು ಮಾತನಾಡಲಿಲ್ಲ. ಇಂಥವೇ ಅನುಭವಗಳು ನಾನು ಕಾಗಿನೆಲೆಯಲ್ಲಿದ್ದಾಗ, ಅಹಮದಾಬಾದ್‌ನಲ್ಲಿದ್ದಾಗ, ಸೊಲ್ಲಾಪುರದಲ್ಲಿದ್ದಾಗ, ಹೀಗೆ ಅನೇಕ ಕಡೆ ಆಗಿವೆ ಅನ್ನಿ. ಇಷ್ಟೇ ಅಲ್ಲ ಸ್ವಾಮಿ, ಒಮ್ಮೆ ನಾನು ತೀರ ಹಣಕಾಸಿನ ದುಃಸ್ಥಿತಿಗೆ ಸಿಕ್ಕಿಹಾಕಿಕೊಂಡಾಗ, ಅದೀಗ ತಾನೆ ಕರ್ನಾಟಕ ಸರ್ಕಾರದ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ನೇಮಕವಾಗಿದ್ದ, ಬಹು ಹತ್ತಿರದ ಗೆಳೆಯನೇ ಅಂದುಕೊಂಡಿದ್ದವನನ್ನು ಒಂದು ದಿನ ಅವನ ಕಚೇರಿಯಲ್ಲಿ ಕಂಡು, "...ಲೋ... ಬಹಳ ತೊಂದ್ರೆ ಆಗಿದೆ, ನನ್ನ 'ಕೂಳೆ' ಕಾದಂಬರಿಯನ್ನು ಪ್ರಾಧಿಕಾರದಿಂದ ಮುದ್ರಿಸಿ, ಒಂದಿಷ್ಟು ಹಣ ಕೊಡ್ಸು ಗುರುವೆ..." ಅಂತ ಕೇಳಿಕೊಂಡೆ. ಆ 'ಗೆಳೆಯ' ನಗುನಗುತ್ತಲೇ '...ಇಲ್ಲ, ಆಗೊಲ್ಲ ಕಣೊ... ನೀನು ನಮ್ಮ ಜಾತಿಯವನೂ ಅಲ್ಲ, ಹೋಗ್ಲಿ ...ಮೀಸಲಾತಿ ಜಾತಿಯವನೂ ಅಲ್ಲ...' ಅಂತ ನನ್ನ ಮನವಿಯನ್ನು ಸಾರಾಸಗಟಾಗಿ ತಿರಸ್ಕರಿಸಿದ. ನಾನು ಹಾಗೆ ಕೇಳಿದ್ದು ಸರಿಯೊ? ತಪ್ಪೊ? ಆಗ ನನಗೆ ಹೊಳೆಯಲಿಲ್ಲ. ಅದರಿಂದ, ತಕ್ಷಣಕ್ಕೆ ಪೆಚ್ಚಾಯಿತಾದರೂ ತೀರ ಬೇಸರ ಮಾಡಿಕೊಳ್ಳಲಿಲ್ಲ. ದುಃಖವನ್ನೂ ಪಡಲಿಲ್ಲ. ಆತಂಕವನ್ನೂ ಪಡಲಿಲ್ಲ. ಹಾಗೆಲ್ಲ ಪಟ್ಟಿದ್ದರೆ ಇಲ್ಲಿಯವರೆಗೆ ನಾನೆಲ್ಲಿರುತ್ತಿದ್ದೆ? ನನ್ನದೇನಿದ್ದರೂ ಮುಂದಕ್ಕೆ ಸಾಗುವುದೇ ಹೊರತು ಆಗಿಹೋದದ್ದನ್ನೇ ನೆನೆನೆನೆದು ಬರೀ ತಗಡು ತಟ್ಟುವುದಲ್ಲ.

ಈ ನಿದರ್ಶನಗಳನ್ನು ನೀಡಲು ಕಾರಣ ನಮ್ಮ ದೇಶದ ಯಾವುದೇ ಕ್ಷೇತ್ರಕ್ಕೆ ಹೋದರೂ ಜಾತೀಯ ಮನಃಸ್ಥಿತಿಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಪ್ರಾತಿನಿಧಿಕವಾಗಿ ತೋರಿಸಲಷ್ಟೇ ಹೊರತು ಅನ್ಯತ್ರ ಅಲ್ಲ. ಇವುಗಳಷ್ಟೇ ಅಥವಾ ಇವುಗಳಿಗಿಂತಲೂ ಮಿಗಿಲಾದ, ಕಹಿಯಾದ, ಘೋರವಾದ ಅನೇಕ ಸಂದರ್ಭಗಳು ನಿಮ್ಮಲ್ಲಿ ಕೆಲವರಿಗಾದರೂ ಅನುಭವಕ್ಕೆ ಬಂದೇ ಇರುತ್ತವೆ ಎಂಬುದು ನನ್ನ ಖಚಿತ ನಂಬಿಕೆ. ಇವುಗಳಿಂದಾಗಿ ಸಮಾಜದಲ್ಲಿ ಅನೇಕ ದುಷ್ಪರಿಣಾಮಗಳು ಉಂಟಾಗುತ್ತಿವೆ. ಸಮಾಜ ಮುಂದೆ ಚಲಿಸುವ ಬದಲು ಹಿಮ್ಮುಖವಾಗಿಯೂ ಚಲಿಸಬಹುದು ಮತ್ತು ಅನೇಕ ವೇಳೆ ತಟಸ್ಥವಾಗಿ, ನಿಂತ ನೀರಿನಂತೆ ಕೊಳೆಯುತ್ತದೆ. ಈ ಜಾತಿ ಮತ್ತು ಅದರ ತರಾವರಿ ನಡೆ ಮತ್ತು ಪರಿಣಾಮಗಳ ಬಗ್ಗೆ ನಮ್ಮ ಅವಧೂತ ವ್ಯಕ್ತಿತ್ವದ ಸಾಹಿತಿ ಎಲ್. ಬಸವರಾಜು, 'ಇದೇನ್ರಿ ಇದು ವಿಚಿತ್ರ?' ಅಂತ ಆಗೊಮ್ಮೆ ಈಗೊಮ್ಮೆ ಹೇಳುತ್ತಿದ್ದ ಹಾಗೆ ಈಗಲೂ ವಿಚಿತ್ರವಾಗಿ ಕಾಣುವ ಈ